# ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ

ಒ.ಎಸ್.ನಂಬ್ರ: 4/2022
ಪಿ.ಡಬ್ಲ್ಯೂ : 1

**ದಿನಾಂಕ: 02-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್ ಎಸ್ ಆರ್ ಬಿ ವಕೀಲರಿಂದ:</u>

1. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪ್ರತಿವಾದಿಗಳಿಗೆ ಸಂಬಂದಪಟ್ಟ ಸ್ವಶೆ ನಂ. 107/2 ರ ಆಸ್ತಿಗೆ ಸಂಬಂದಪಟ್ಟಂತೆ ಪ್ರಕರಣ ದಾಖಲಿಸಿರುತ್ತೇನೆ. ಅದು ಭವಾನಿ ಶೆಡ್ತಿರವರಿಗೆ ಸೇರಿದ್ದಾಗಿರುತ್ತದೆ. ಭವಾನಿ ಶೆಡ್ತಿರವರಿಗೆ ಆ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸಾಕ್ಷಿ ಯಾರಿಂದ ಪಿತ್ರಾರ್ಜಿತವಾಗಿ ಆಸ್ತಿ ಬಂದಿದೆ ಎಂದರೆ ಸಾಕ್ಷಿ ಮೊದಲಿನಿಂದಲೂ ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ. 107/2 ರ ಭವಾನಿ ಶೆಡ್ತಿರವರ ಆಸ್ತಿಗೆ ಸಂಬಂದಪಟ್ಟಂತೆ ಅವರ ಹಕ್ಕಿನ ದಾಖಲೆಯಾದ ಪಾಲುಪಟ್ಟಿಯನ್ನು ನೋಡಿರುತ್ತೇನೆ. ಸದರಿ ದಾಖಲೆ 2003 ನೇ ಇಸವಿಯದ್ದು ಇರಬಹುದು.

2. ಆ ಪಾಲುಪಟ್ಟಿಯಲ್ಲಿ ಷರತ್ತುಗಳ ಕುರಿತು ನಮೂದು ಇರುತ್ತದೆ. ಅದರಲ್ಲಿ ರಸ್ತೆಯ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವ ರಸ್ತೆ ರಾಷ್ಟ್ರೀಯ ಹೆದ್ದಾರಿಯಿಂದ ನಮ್ಮ ಮನೆಯವರೆಗೆ ಹೋಗುತ್ತದೆ. ಪಾಲುಪಟ್ಟಿಯಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಪ್ರಾರಂಭಿಸಿ ನಮ್ಮ ಮನೆಯಾದ ಕರುಣಾಕರ ಶೆಟ್ಟಿ ರವರ ಮನೆಗೆ ಎಂದು ನಮೂದು ಇರುತ್ತದಾ ಎಂದರೆ ಸಾಕ್ಷಿ ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪಾಲುಪಟ್ಟಿಯಲ್ಲಿ ಇಂತಂಲಿಂದ ಇಂತಲ್ಲಿಗೆ ಹೋಗುವ ರಸ್ತೆ ಎಂದು ನಮೂದು ಇರುವುದಿಲ್ಲ.

3. ಪಾಲುಪಟ್ಟಿಯಲ್ಲಿ ಯಾವ ಸರ್ವೆ ನಂಬರದ ಮೂಲಕ ಹಾಗೂ ಎಷ್ಟು ವಿಸ್ತೀರ್ಣದ ಸ್ಥಳದ ಮೂಲಕ ಹಾದು ಹೋಗುವ ರಸ್ತೆ ಎಂದು ನಮೂದು ಇರುವುದಿಲ್ಲ. ಈ ಆಸ್ತಿ ಇರುವ ಸ್ಥಳ ಮೊದಲು ತ್ರಾಸಿ ಗ್ರಾಮದ ಪಂಚಾಯತಿಗೆ ಒಳಪಟ್ಟಿತ್ತು ಎಂದರೆ ಸರಿ. ಈಗ ಅದು ಹೊಸಾಡು ಗ್ರಾಮದ ಗ್ರಾಮ ಪಂಚಾಯತಗೆ ಒಳಪಡುತ್ತದೆ ಎಂದರೆ ಸರಿ. ನಾನು ಹೇಳುವಂತೆ ಸರ್ವೆ ನಂ. 107/2 ರಲ್ಲಿ ಹಾದುಹೋಗುವ ರಸ್ತೆ ಸಾರ್ವಜನಿಕ ರಸ್ತೆಯಾಗಿರುತ್ತದೆ. ಅದು ಸಾರ್ವಜನಿಕ ರಸ್ತೆ ಎಂದು ತೋರಿಸಲು ಪಂಚಾಯತಿಯಲ್ಲಿ

ದಾಖಲೆಗಳು ಇರುತ್ತವೆ. ಪಂಚಾಯತಿಯವರು ರಸ್ತೆ ಕೇಳಿದಾಗ ಅವರು ಬಿಟ್ಟುಕೊಟ್ಟಿರುತ್ತಾರೆ.

4. ತ್ರಾಸಿ ಗ್ರಾಮ ಪಂಚಾಯತಿಯವರು ಸರ್ವೆ ನಂ. 107/2 ರಲ್ಲಿ ಯಾವುದೇ ರಸ್ತೆ ಹಾದುಹೋಗುವುದಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ನಮಗೆ ಇದೆ ಎಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಹೊಸಾಡು ಗ್ರಾಮ ಪಂಚಾಯತಿಯವರು ಸಹ ಸರ್ವೆ ನಂ. 107/2 ರಲ್ಲಿ ಯಾವುದೇ ರಸ್ತೆ ಹಾದು ಹೋಗುವುದಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಯಂಚಾಯತಿಯವರು ನನಗೆ ಯಾವ ಸರ್ವೆ ನಂಬರಲ್ಲಿ ರಸ್ತೆ ಹಾದುಹೋಗುತ್ತದೆ ಎಂದು ಹೇಳಿರುವುದಿಲ್ಲ. ಹಾಡಿಮನೆ ಕೇರಿಗೆ ಹೋಗುವ ಪಂಚಾಯತಿ ರಸ್ತೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

5. ನಮ್ಮ ಮನೆ ಹಾಡಿಮನೆ ಕೇರಿಯಲ್ಲಿ ಇರುತ್ತದೆ. ಆ ರಸ್ತೆ ನಮ್ಮ ಮನೆಗೆ ಹೋಗುವ ರಸ್ತೆ ಎಂದು ಪಂಚಾಯತಿಯವರು ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ